# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಒಳನಾಡು ಹಾಗೂ ಹಿನ್ನೀರು ಜಲಸಂಪನ್ಮೂಲಗಳಲ್ಲಿ "ಸೀಗಡಿ ಮತ್ತು ಹಿನ್ನೀರು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆಯನ್ನು 2019-20 ನೇ ಸಾಲಿನಿಂದ ಜಾರಿಗೆ ತರಲು ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ:- ಪತ್ರ ಸಂಖ್ಯೆ: ಮೀನಿ/17/ಎಫ್ ವೈಪಿ/2019, ದಿನಾಂಕ: 08-05-2019.

******

**ಪ್ರಸ್ತಾವನೆ:**

ರಾಜ್ಯ ಸರ್ಕಾರವು 2019-20 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ -77 ರಲ್ಲಿ ರಾಜ್ಯದಲ್ಲಿ ಲಭ್ಯವಿರುವ ಒಳನಾಡು ಹಾಗೂ ಹಿನ್ನೀರು ಜಲಸಂಪನ್ಮೂಲಗಳಲ್ಲಿ ಸೀಗಡಿ ಮತ್ತು ಮೀನು ಕೃಷಿಯನ್ನು ಪ್ರೋತ್ಸಾಹಿಸಲು ಪ್ರತಿ ಹೆಕ್ಟೇರ್ ವಿಸ್ತೀರ್ಣಕ್ಕೆ 1 ಲಕ್ಷ ರೂ.ಗಳ ಘಟಕ ವೆಚ್ಚಕ್ಕೆ ಶೇ.50 ರಷ್ಟು ಸಹಾಯಧನ ನೀಡಲಾಗುವುದು. ಪ್ರಸಕ್ತ ಸಾಲಿನಲ್ಲಿ 400 ಘಟಕಗಳಿಗೆ ಸಹಾಯಧನ ನೀಡುವ ಉದ್ದೇಶದಿಂದ 2 ಕೋಟಿ ರೂ.ಗಳನ್ನು ನೀಡಲಾಗಿದೆ" ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ ನಿರ್ದೇಶಕರ ಪತ್ರದಲ್ಲಿ, 2019-20 ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಒಳನಾಡು ಜಲಸಂಪನ್ಮೂಲಗಳಲ್ಲಿ ಸಿಹಿನೀರು ಸೀಗಡಿ ಕೃಷಿ ಹಾಗೂ ಹಿನ್ನೀರು ಪ್ರದೇಶಗಲ್ಲಿ ಸೀಗಡಿ / ಮೀನು ಕೃಷಿಯನ್ನು ಹಾಗೂ ಪಂಜರ ಕೃಷಿಯನ್ನು ಸೀಗಡಿ/ಮೀನುಮರಿ ಮತ್ತು ಆಹಾರವನ್ನು ಖರೀದಿಸಲು ಸಹಾಯಧನ ನೀಡುವ ಮೂಲಕ ಪ್ರೋತ್ಸಾಹಿಸಲು ಪ್ರಸ್ತಾವಿಸಲಾಗಿದೆ.

ಒಳನಾಡು ಜಲಸಂಪನ್ಮೂಲಗಳಲ್ಲಿ ಅರೆ ತೀವ್ರ ಮೀನು ಕೃಷಿಯಡಿ ಈಗಾಗಲೇ ಬಳಸಲಾಗುತ್ತಿರುವ ಕಾಟ್ಲ, ರೋಹು, ಮೃಗಾಲ್ ಮತ್ತು ಸಾಮಾನ್ಯ ಗೆಂಡೆ ಮೀನಿನ ತಳಿಗಳ ಜೊತೆಗೆ ಸಿಹಿನೀರು ಸೀಗಡಿಯನ್ನು ಬೆಳೆಸಬಹುದಾಗಿದೆ. ಸೀಗಡಿಯನ್ನು ಯಶಸ್ವಿಯಾಗಿ ಸಣ್ಣ ಮತ್ತು ಮಧ್ಯಮ ವರ್ಗದ ಜಲಸಂಪನ್ಮೂಲಗಳಲ್ಲಿ ಕೃಷಿ ಮಾಡಬಹುದಾಗಿದೆ.

ಕರ್ನಾಟಕ ರಾಜ್ಯವು 8000 ಹೆಕ್ಟೆರ್‌ನಷ್ಟು ಹಿನ್ನೀರಿನ ಪ್ರದೇಶವನ್ನು ಹೊಂದಿದೆ. ಈ ಸಂಪನ್ಮೂಲದ ಬಹುತೇಕ ಪ್ರದೇಶವು ಮೀನುಕೃಷಿಗೆ ಅತ್ಯಂತ ಯೋಗ್ಯವಾಗಿದೆ. ಈ ಪ್ರದೇಶದಲ್ಲಿ ಹಿನ್ನೀರು ಸೀಗಡಿ ಹಾಗೂ ಅನೇಕ ಹಿನ್ನೀರು ಮೀನು ತಳಿಗಳಾದ Seebass, Cobia, Milk fish, Mullet, Pearl spot, pompano, Sea breams, Grouper and Red snapper ಮೀನುಕೃಷಿ ಮಾಡಬಹುದು, ಈ ಮೀನುಗಳಿಗೆ ದೇಶೀಯ ಮಾರುಕಟ್ಟೆ ಜೊತೆಗೆ ವಿದೇಶಿ ಮಾರುಕಟ್ಟೆಯ ಬೇಡಿಕೆಯು ಹೆಚ್ಚಾಗಿರುತ್ತದೆ ಮತ್ತು ಮಾರುಕಟ್ಟೆ ಯಲ್ಲಿ ಉತ್ತಮ ಬೆಲೆಗೆ ಮಾರಾಟವಾಗಿ ಕೃಷಿಕರಿಗೆ ಹೆಚ್ಚಿನ ಆದಾಯ ತಂದುಕೊಡುತ್ತಿದೆ.

ಆದರೆ ಗುತ್ತಿಗೆ ಪಡೆದ ಕೆರೆಗಳಲ್ಲಿ ಹಾಗೂ ಸ್ವಂತ ಜಮೀನಿವಲ್ಲಿ ಕೊಳ ಹೊಂದಿರುವವರಿಗೆ ಸಿಹಿ ನೀರು ಸೀಗಡಿ ಕೃಷಿಯಾಗಲಿ, ಸಮುದ್ರ ಸೀಗಡಿ ಅಥವಾ ಮೀನು ಕೃಷಿಯಾಗಲಿ ಕೈಗೊಳ್ಳಲು ಮೀನು/ಸೀಗಡಿ ಮರಿ ಹಾಗೂ ಆಹಾರಕ್ಕೆ ಹೆಚ್ಚಿನ ಬಂಡವಾಳ ಹಾಕಬೇಕಾಗಿರುವುದರಿಂದ ಈ ತಳಿಗಳ ಕೃಷಿಯನ್ನು ಕೈಗೊಳ್ಳಲು ಕೃಷಿಕರು ಮುಂದೆ ಬರುತ್ತಿಲ್ಲ. ಈ ರೀತಿಯ ಕೃಷಿಯನ್ನು ಕೈಗೊಳ್ಳುವುದನ್ನು ಪ್ರೋತ್ಸಾಹಿಸಲು 2019-20 ನೇ ಸಾಲಿನಿಂದ ಸೀಗಡಿ (ಸಿಹಿನೀರು/ಸಮುದ್ರ) ಮತ್ತು ಹಿನ್ನೀರು ಮೀನು ಕೃಷಿಗೆ ಪ್ರೋತ್ಸಾಹ ಎಂಬ ಹೊಸ ಕಾರ್ಯಕ್ರಮವನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ. ಈ ಕಾರ್ಯಕ್ರಮದಡಿ ಈ ಕೆಳಗಿನ 4 ಘಟಕಗಳನ್ನು ಅಳವಡಿಸಲು ಪ್ರಸ್ತಾವಿಸಲಾಗಿದೆ.

1. ಇಲಾಖೆ/ ಗ್ರಾಮ ಪಂಚಾಯತ್ ಕೆರೆಗಳಲ್ಲಿ ಸಿಹಿ ನೀರು ಸೀಗಡಿ ಕೃಷಿ:
2. ಸ್ವಂತ ಕೊಳಗಳಲ್ಲಿ ಸಿಹಿ ನೀರು ಸಮುದ್ರ ಸೀಗಡಿ ಕೃಷಿಗೆ ಸಹಾಯ:
3. ಹಿನ್ನೀರು ಪ್ರದೇಶಗಳಲ್ಲಿ ಮೀನು ಕೃಷಿಗೆ ಸಹಾಯ
4. ಹಿನ್ನಿರು ಪ್ರದೇಶಗಳಲ್ಲಿ ಪಂಜರ ಮೀನು ಕೃಷಿಗೆ ಸಹಾಯ:

2019-20 ನೇ ಸಾಲಿನಲ್ಲಿ ಈ ಕಾರ್ಯಕ್ರಮವನ್ನು 400 ಹೆಕ್ಟೇರ್ ಜಲ ಪ್ರದೇಶದಲ್ಲಿ ಕೈಗೊಳ್ಳಲು ಉದ್ದೇಶಿಲಾಗಿದ್ದು, ಇದಕ್ಕಾಗಿ ಆಯವ್ಯಯದಲ್ಲಿ ರೂ.200.00 ಲಕ್ಷಗಳ ಅನುದಾನ ಕಾಯ್ದಿರಿಸಲಾಗಿದೆ. ಈ ಹಿನ್ನಲೆಯಲ್ಲಿ ಒಳನಾಡು ಹಾಗೂ ಹಿನ್ನೀರು ಮೀನುಗಾರಿಕೆ ಅಭಿವೃದ್ಧಿಗಾಗಿ "ಸೀಗಡಿ ಮತ್ತು ಹಿನ್ನೀರು ಮೀನು ಕೃಷಿಗೆ ಪ್ರೋತ್ಸಾಹ" ಎಂಬ ಹೊಸ ಕಾರ್ಯಕ್ರಮವನ್ನು "ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ" ಎಂಬ ಯೋಜನೆಯಡಿ ಅನುಬಂಧದಲ್ಲಿ ನೀಡಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ ಇ-5 ಮೀಇಯೋ 2019, ಬೆಂಗಳೂರು ದಿನಾಂಕ: 20-07-2019**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2019-20 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-77 ರಲ್ಲಿ ಘೋಷಿಸಿರುವ ರಾಜ್ಯದಲ್ಲಿ ಲಭ್ಯವಿರುವ ಒಳನಾಡು ಹಾಗೂ ಹಿನ್ನೀರು ಜಲಸಂಪನ್ಮೂಲಗಳಲ್ಲಿ ಸೀಗಡಿ ಮತ್ತು ಮೀನು ಕೃಷಿಯನ್ನು ಪ್ರೋತ್ಸಾಹಿಸಲು ಪ್ರತಿ ಹೆಕ್ಟೇರ್ ವಿಸ್ತೀರ್ಣಕ್ಕೆ 1 ಲಕ್ಷ ರೂ.ಗಳ ಘಟಕ ವೆಚ್ಚಕ್ಕೆ ಶೇ.50 ರಷ್ಟು ಸಹಾಯಧನವನ್ನು ಪ್ರಸಕ್ತ ಸಾಲಿನಲ್ಲಿ 400 ಘಟಕಗಳಿಗೆ ನೀಡುವ ಉದ್ದೇಶಿತ ಹೊಸ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಈ ಆದೇಶದ ಅನುಬಂಧದಲ್ಲಿ ನಮೂದಿಸಿರುವ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು, ಈ ಸಂಬಂಧ ನಮೂನೆ-1, 2, 3 ಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಸದರಿ ಕಾರ್ಯಕ್ರಮದ ವೆಚ್ಚವನ್ನು 2019-20ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2405-00-101-0-03-059 ಅಡಿ ಒದಗಿಸಲಾಗಿರುವ ರೂ.200.00 ಲಕ್ಷಗಳ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿಎಸ್/ಪಿಎಫ್ಒ/12/2019, ದಿನಾಂಕ: 29-05-2019 ಮತ್ತು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ: ಆಇ/25/ವೆಚ್ಚ-4/2019, ದಿನಾಂಕ: 28-06-2019 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

20/7/19

(ರಶ್ಮಿ ಶ್ರೀಕಾಂತ ಗಜರೆ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

20/07/19

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ)(ಇ&ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ನಿರ್ದೇಶಕರು (ಪಿಎಫ್ಡಿ), ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5) ಜಂಟಿ ನಿರ್ದೇಶಕರು, ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6) ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರುಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
7) ಆಂತರಿಕ ಆರ್ಥಿಕ ಸಲಹೆಗಾರರು, ಕೃ.ತೋ. ಮತ್ತು ಪ.ಸಂ.ಮೀ. ಇಲಾಖೆ.
8) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
9) ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
10) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಮ್ / ಹೆಚ್ಚುವರಿ ಪ್ರತಿಗಳು.

**ಆದೇಶ ಸಂಖ್ಯೆ: ಪಸಂಮೀ ಇ-5 ಮೀಇಯೋ 2019, ಬೆಂಗಳೂರು ದಿನಾಂಕ: 20-07-2019ರ**

## ಅನುಬಂಧ

## "ಸೀಗಡಿ (ಸಿಹಿನೀರು / ಸಮುದ್ರ) ಮತ್ತು ಹಿನ್ನೀರು ಮೀನುಕೃಷಿಗೆ ಪ್ರೋತ್ಸಾಹ " ಯೋಜನೆಯ ಸಹಾಯಧನ ಮಂಜೂರಾತಿಗಾಗಿ ಷರತ್ತು ಮತ್ತು ನಿಭಂದನೆಗಳು

1. ಈ ಯೋಜನೆಯಡಿ ಸಹಾಯಧನ ಪಡೆಯಲು ಫಲಾನುಭವಿಯು (ವ್ಯಕ್ತಿ/ಸಂಘ) ಇಲಾಖಾ ವ್ಯಾಪ್ತಿಗೆ/ ಗ್ರಾಮಪಂಚಾಯತ್ ವ್ಯಾಪ್ತಿಗೆ ಒಳಪಡುವ ಪೂರ್ಣಕಾಲಿಕ / ದೀರ್ಘಕಾಲಿಕ ಕೆರೆಯ ಮೀನು ಪಾಶುವಾರು ಹಕ್ಕನ್ನು ಗುತ್ತಿಗೆ ಅಥವಾ ಟೆಂಡರ್ ಕಂ ಹರಾಜು ಮೂಲಕ ಪಡೆದಿರತಕ್ಕದ್ದು. ಕನಿಷ್ಠ 6 ತಿಂಗಳುಗಳ ಕಾಲ 5 ಅಡಿಗಿಂತ ಹೆಚ್ಚು ನೀರಿನ ಮಟ್ಟ ಹೊಂದಿರಬೇಕು. ಜಲವಿಸ್ತೀರ್ಣದ ಶೇ.50 ರಷ್ಟು ಭಾಗವನ್ನು ಉಪಯುಕ್ತ ಜಲವಿಸ್ತೀರ್ಣ ಎಂದು ಪರಿಗಣಿಸುವುದು. ಕನಿಷ್ಠ 2 ಹೆಕ್ಟೇರ್ ಮತ್ತು ಗರಿಷ್ಠ 50 ಹೆಕ್ಟೇರ್ ಉಪಯುಕ್ತ ಜಲ ವಿಸ್ತೀರ್ಣವುಳ್ಳ ಇಲಾಖಾ ಕೆರೆಗಳು / ಗರಿಷ್ಠ 25 ಹೆಕ್ಟೇರ್ ಉಪಯುಕ್ತ ಜಲವಿಸ್ತೀರ್ಣವುಳ್ಳ ಗ್ರಾಮಪಂಚಾಯತ್ ಕೆರೆಗಳು ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಆಯ್ಕೆ ಮಾಡಲಾಗುವುದು.

2. ಖಾಸಗಿ ಕ್ಷೇತ್ರದ (ಸ್ವಂತ ಕೊಳಗಳಲ್ಲಿ) ಕನಿಷ್ಠ 0.2 ಹೆಕ್ಟೇರ್ ರಿಂದ ಗರಿಷ್ಠ 2 ಹೆಕ್ಟೇರ್ ಜಲ ವಿಸ್ತೀರ್ಣವರೆಗಿನ ಕೊಳಗಳನ್ನು ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಆಯ್ಕೆ ಮಾಡಲಾಗುವುದು.

3. ಹಿನ್ನೀರು ಪ್ರದೇಶಗಳಲ್ಲಿ ಪಂಜರ ಕೃಷಿ ಕೈಗೊಳ್ಳುವವರು ಈ ಯೋಜನೆಯಡಿ ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ.

4. ಇಲಾಖೆ ಕೆರೆಗಳಲ್ಲಿ ಸಿಹಿನೀರು ಸೀಗಡಿ ಕೃಷಿ ಕೈಗೊಳ್ಳಲು ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ 500 ಜುವೆನೈಲ್ ಸಿಹಿನೀರು ಸೀಗಡಿ ಮರಿಗಳನ್ನು (Juveniles) ಬಿತ್ತನೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಗರಿಷ್ಠ 50 ಹೆಕ್ಟೇರ್ ಉಪಯುಕ್ತ ಜಲವಿಸ್ತೀರ್ಣದಲ್ಲಿ ಗರಿಷ್ಠ 25,000 ಸೀಗಡಿ ಮರಿ ಬಿತ್ತನೆಗೆ ಅವಕಾಶ ಮಾಡಲಾಗಿದೆ. ಗ್ರಾಮಪಂಚಾಯ್ತಿ ಕೆರೆಗಳಲ್ಲಿ ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ 1000 ಜುವೆನೈಲ್ ಸೀಗಡಿ ಮರಿಗಳನ್ನು ಬಿತ್ತನೆ ಮಾಡಬಹುದಾಗಿದೆ. ಗರಿಷ್ಠ 25 ಹೆಕ್ಟೇರ್ ಉಪಯುಕ್ತ ಜಲವಿಸ್ತೀರ್ಣದಲ್ಲಿ ಗರಿಷ್ಠ 25,000 ಸೀಗಡಿ ಮರಿ ಬಿತ್ತನೆಗೆ ಅವಕಾಶ ಮಾಡಲಾಗಿದೆ. ಸೀಗಡಿ ಮರಿಗಳಿಗೆ ಮರಿ ಒಂದಕ್ಕೆ ರೂ.4 ರಂತೆ ಗರಿಷ್ಠ 50 ಹೆಕ್ಟೇರ್ ಜಲವಿಸ್ತೀರ್ಣದ ಇಲಾಖೆ/ 25 ಹೆಕ್ಟೇರ್ ಜಲವಿಸ್ತೀರ್ಣದ ಗ್ರಾಮಪಂಚಾಯತ್ ಕೆರೆಗಳಲ್ಲಿ ಸೀಗಡಿ ಮರಿ ಬಿತ್ತನೆ ಮಾಡಲು ಒಟ್ಟು ರೂ.1.00 ಲಕ್ಷ ವೆಚ್ಚವಾಗುತ್ತದೆ. ಈ ಯೋಜನೆ ಅನುಷ್ಠಾನಕ್ಕೆ ಉಂಟಾಗುವ ವೆಚ್ಚದ ಶೇ.50 ರಷ್ಟು ಗರಿಷ್ಠ ರೂ.50,000/- ಗಳ ಸಹಾಯಧನ ನೀಡಲಾಗುತ್ತದೆ.

5. ಸ್ವಂತ ಕೊಳಗಳಲ್ಲಿ ಸಿಹಿನೀರು ಸೀಗಡಿ/ ಸಮುದ್ರ ಸೀಗಡಿ ಕೃಷಿ ಕೈಗೊಳ್ಳಲು ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ 10,000 ಜುವೆನೈಲ್ ಸೀಗಡಿಮರಿಗಳನ್ನು (Juveniles) ಬಿತ್ತನೆ ಮಾಡಲು ಹಾಗೂ 1.00 ಟನ್ ಕೃತಕ ಆಹಾರ ಉಪಯೋಗಿಸಲು ಅವಕಾಶ ಮಾಡಲಾಗಿದೆ. ಪ್ರಸ್ತುತ ಇರುವ ದರಗಳ ಪ್ರಕಾರ 10,000 ಬಲಿತ ಸೀಗಡಿ ಮರಿಗಳಿಗೆ ಮರಿ ಒಂದಕ್ಕೆ ರೂ.4 ರಂತೆ ಒಟ್ಟು ರೂ.40,000 ಹಾಗೂ 1.00 ಟನ್ ಕೃತಹ ಆಹಾರಕ್ಕೆ ಪ್ರತಿ ಟನ್‌ಗೆ ರೂ. 60,000 ಗಳು ವೆಚ್ಚವಾಗುತ್ತದೆ. ಹೀಗೆ ಪ್ರತಿ ಹೆಕ್ಟೇರ್ಗೆ ಘಟಕ ವೆಚ್ಚ ರೂ.1,00,000ಗಳಾಗಿರುತ್ತದೆ. ಈ ಯೋಜನೆಯಡಿ ಘಟಕ ವೆಚ್ಚದ ಶೇ.50 ರಷ್ಟು ಗರಿಷ್ಟ ರೂ.50,000 ಪ್ರತಿ ಹೆಕ್ಟೇರ್ಗೆ ನೀಡಿ ಪ್ರೋತ್ಸಾಹಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯಡಿ ಗರಿಷ್ಠ 2 ಹೆಕ್ಟೇರ್ ಗಳಲ್ಲಿ ಸೀಗಡಿ ಕೃಷಿ ಕೈಗೊಳ್ಳಲು ಅವಕಾಶ ಮಾಡಲಾಗಿದ್ದು, ಒಬ್ಬ ಫಲಾನುಭವಿಗೆ ಗರಿಷ್ಠ ರೂ.1.00 ಲಕ್ಷ ಸಹಾಯಧನ ನೀಡಲಾಗುವುದು.

6. ಹಿನ್ನೀರು ಪ್ರದೇಶಗಳಲ್ಲಿ ಸ್ವಂತ ಕೊಳಗಳಲ್ಲಿ ಅರೆ ತೀವ್ರ ಮೀನು ಕೃಷಿ ಕೈಗೊಳ್ಳಲು ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ 20,000 ಬಲಿತ ಮೀನುಮರಿಗಳನ್ನು (Juveniles) ಬಿತ್ತನೆ ಮಾಡಲು ಅವಕಾಶ ಮಾಡಲಾಗಿದೆ. ಪ್ರಸ್ತುತ ಇರುವ ದರಗಳ ಪ್ರಕಾರ 20,000 ಬಲಿತ ಮೀನುಮರಿಗಳಿಗೆ ಮರಿ ಒಂದಕ್ಕೆ ರೂ.5 ರಂತೆ ಒಟ್ಟು ರೂ. 1,00,000 ವೆಚ್ಚವಾಗುತ್ತದೆ. ಹೀಗೆ ಪ್ರತಿ ಹೆಕ್ಟೇರ್ ಗೆ ಘಟಕ ವೆಚ್ಚ ರೂ.1,00,000ಗಳಾಗಿರುತ್ತದೆ. ಈ ಯೋಜನೆಯಡಿ ಘಟಕ ವೆಚ್ಚದ ಶೇ.50 ರಷ್ಟು ಗರಿಷ್ಟ ರೂ.50,000 ಪ್ರತಿ ಹೆಕ್ಟೇರ್ ಗೆ ನೀಡಿ ಪ್ರೋತ್ಸಾಹಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯಡಿ ಗರಿಷ್ಠ 2 ಹೆಕ್ಟೇರ್ಗಳಲ್ಲಿ ಮೀನು ಕೃಷಿ ಕೈಗೊಳ್ಳಲು ಅವಕಾಶ ಮಾಡಲಾಗಿದ್ದು, ಒಬ್ಬ ಫಲಾನುಭವಿಗೆ ಗರಿಷ್ಠ ರೂ.1.00 ಲಕ್ಷ ಸಹಾಯಧನ ನೀಡಲಾಗುವುದು.

7. ಹಿನ್ನೀರು ಪ್ರದೇಶಗಳಲ್ಲಿ ಪಂಜರ ಕೃಷಿ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಕೇಜಿನ ವಿಸ್ತೀರ್ಣ 20x8x8 ಅಡಿಗಳಾಗಿರುತ್ತದೆ. ಒಂದು ಪಂಜರದಲ್ಲಿ 2500 ದೊಡ್ಡ ಗಾತ್ರದ ಮೀನುಮರಿಗಳ ಬಿತ್ತನೆಗೆ ಅವಕಾಶ ಕಲ್ಪಿಸಲಾಗಿದೆ. ಪ್ರಸ್ತುತ ಇರುವ ದರಗಳ ಪ್ರಕಾರ 2,500 ದೊಡ್ಡ ಗಾತ್ರದ ಮೀನುಮರಿಗಳಿಗೆ ಮರಿ ಒಂದಕ್ಕೆ ರೂ.40 ರಂತೆ ಒಟ್ಟು ರೂ. 1,00,000ಗಳು ವೆಚ್ಚವಾಗುತ್ತದೆ. ಹೀಗೆ ಪ್ರತಿ ಪಂಜರದ ಘಟಕ ವೆಚ್ಚ ರೂ. 1,00,000ಗಳಾಗಿರುತ್ತದೆ. ಈ ಯೋಜನೆಯಡಿ ಘಟಕ ವೆಚ್ಚದ ಶೇ.50 ರಷ್ಟು ಗರಿಷ್ಟ ರೂ.50,000 ಪ್ರತಿ ಪಂಜರಕ್ಕೆ ನೀಡಿ ಪ್ರೋತ್ಸಾಹಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯಡಿ ಫಲಾನುಭವಿ ಗರಿಷ್ಠ 2 ಪಂಜರಗಳಲ್ಲಿ ಮೀನು ಕೃಷಿ ಕೈಗೊಳ್ಳಲು ಅವಕಾಶ ಮಾಡಲಾಗಿದ್ದು, ಒಬ್ಬ ಫಲಾನುಭವಿಗೆ ಗರಿಷ್ಠ ರೂ.1.00 ಲಕ್ಷ ಸಹಾಯಧನ ನೀಡಲಾಗುವುದು.

8. ಸದರಿ ಫಲಾನುಭವಿಯು ಸಹಾಯಧನ ಅರ್ಜಿ ಸಲ್ಲಿಸುವ ವರ್ಷದಲ್ಲಿ ಆ ವರ್ಷದ ಗುತ್ತಿಗೆ / ಬಿಡ್ ಮೊತ್ತವನ್ನು ಇಲಾಖೆ/ ಗ್ರಾಮ ಪಂಚಾಯತ್‌ಗೆ ಪಾವತಿಸತಕ್ಕದ್ದು. ಖಾಸಗಿ ವಲಯದ ಕೊಳಗಳಿಗೆ ಗುತ್ತಿಗೆ ಮೊತ್ತದ ಪಾವತಿ ಅನ್ವಯಿಸುವುದಿಲ್ಲ.

9. ಗುತ್ತಿಗೆ / ಟೆಂಡರ್ ಕಂ ಹರಾಜು ಅವಧಿಯು ಕನಿಷ್ಟ 2 ವರ್ಷಗಳು ಬಾಕಿಯಿರತಕ್ಕದ್ದು.

10. ಒಟ್ಟು ಯೋಜನಾ ವೆಚ್ಚದಲ್ಲಿ ಸಹಾಯಧನ ಹೊರತು ಪಡಿಸಿ ಉಳಿಯುವ ಶೇ.50ರಷ್ಟು ವೆಚ್ಚವನ್ನು ಫಲಾನುಭವಿಯು ಭರಿಸತಕ್ಕದ್ದು. ಈ ವೆಚ್ಚವನ್ನು ಭರಿಸುವ ಬಗ್ಗೆ ಆರ್ಥಿಕ ಸಂಪನ್ಮೂಲ ಲಭ್ಯವಿರುವ ಬಗ್ಗೆ ಸೂಕ್ತ ದಾಖಲಾತಿಗಳನ್ನು ಸಲ್ಲಿಸತಕ್ಕದ್ದು.

11. ಸಹಾಯಧನ ಪಡೆಯಲು ಫಲಾನುಭವಿಯು ಒಮ್ಮೆ ಮಾತ್ರ ಅರ್ಹರಾಗಿರುತ್ತಾರೆ.

12. ಇಲಾಖೆಯಿಂದ ಅಧಿಕೃತಗೊಳಿಸಿದ ಸರಬರಾಜುದಾರರಿಂದ ಮಾತ್ರ ಸೀಗಡಿ ಮರಿಗಳನ್ನು ಖರೀದಿಸಿಕೊಳ್ಳಬೇಕು.

## <u>ಸಹಾಯಧನ ಮಂಜೂರು ಮಾಡುವ ಕಾರ್ಯವಿಧಾನ</u>

1) ಇಲಾಖಾಧಿಕಾರಿಗಳು ವ್ಯಾಪಕ ಪ್ರಚಾರ ನೀಡಿ, ಅರ್ಜಿಯನ್ನು ಆಹ್ವಾನಿಸುವುದು.

2) ಮೀನು/ ಸೀಗಡಿ ಕೃಷಿಕರು ತಮ್ಮ ಕೆರೆ/ ಕೊಳ /ಪಂಜರಗಳಲ್ಲಿ ಕೃಷಿ ಕೈಗೊಳ್ಳಲು ಆಸಕ್ತಿ ಇರುವ ಬಗ್ಗೆ ಇಚ್ಚೆ ವ್ಯಕ್ತಪಡಿಸಿ, ಸಂಬಂಧಿಸಿದ ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2), ರವರಿಗೆ ನಮೂನೆ-1 ರಲ್ಲಿ ಅರ್ಜಿ ನೀಡುವುದು.

3) ತಾಲ್ಲೂಕಿನ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2) ರವರು ಅರ್ಜಿ ಮತ್ತು ದಾಖಲಾತಿಗಳನ್ನು ಹಾಗೂ ಕೆರೆ/ ಕೊಳ /ಪಂಜರಗಳನ್ನು ಪರಿಶೀಲಿಸಿ ಸೀಗಡಿ/ಮೀನು ಕೃಷಿಗೆ ಸೂಕ್ತವೆಂದು ಕಂಡುಬಂದಲ್ಲಿ, ಅರ್ಜಿಯನ್ನು ಶಿಫಾರಸ್ಸು ಮಾಡುವುದು. ವಲಯದ ಮೀನುಗಾರಿಕೆ ಉಪನಿರ್ದೇಶಕರು, ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಮೀನುಗಾರಿಕೆ ಅಧಿಕಾರಿಗಳು ಮತ್ತು ಸಂಬಂಧಪಟ್ಟ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನೊಳಗೊಂಡ ಸಮಿತಿಯು ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕದ್ದು. ಜಿಲ್ಲಾ ಮಟ್ಟದ ಅಧಿಕಾರಿಯು ನಮೂನೆ-2 ರಲ್ಲಿ ಅನುಮತಿ ನೀಡತಕ್ಕದ್ದು. ಚಿಕ್ಕ ಕೆರೆಗಳಿಗೆ ಆದ್ಯತೆ ನೀಡುವುದು. ನಿಗದಿಪಡಿಸಿದ ಗುರಿಗಿಂತ ಜಾಸ್ತಿ ಅರ್ಹ ಅರ್ಜಿದಾರರು ಇದ್ದಲ್ಲಿ, ಫಲಾನುಭವಿಗಳ ಸಮ್ಮುಖದಲ್ಲಿ ಲಾಟರಿ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡುವುದು. ಹಾಗೂ ಒಂದು ತಿಂಗಳ ಒಳಗೆ ಸೀಗಡಿ/ಮೀನುಮರಿ, ಕೃತಕ ಆಹಾರ ಖರೀದಿಸಿ ಮೂಲ ಬಿಲ್ಲುಗಳನ್ನು ನಮೂನೆ-3ರಲ್ಲಿ ಮಾಹಿತಿಯನ್ನು ಸಲ್ಲಿಸುವುದು.

4) ಫಲಾನುಭವಿಯು ಮೀನು/ ಸೀಗಡಿ ಕೃಷಿ ಕೈಗೊಂಡು ಹೂಡಿಕೆ ಮಾಡಿದ ಬಗ್ಗೆ ನಮೂನೆ-3 ರಲ್ಲಿ ಸೂಕ್ತ ದಾಖಲೆಗಳೊಂದಿಗೆ ಸಹಾಯಧನ ಮಂಜೂರಾತಿಗೆ ನಿಗದಿತ ದಿನಾಂಕದೊಳಗೆ ಅರ್ಜಿ ಸಲ್ಲಿಸುವುದು. ನಮೂನೆ-3 ರ ಮಾಹಿತಿಯನ್ನು ಭೌತಿಕವಾಗಿ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2), ರವರು ಪರಿಶೀಲಿಸಿ, ವಿವರಗಳು ಸರಿಯಿರುವ ಬಗ್ಗೆ ದೃಡೀಕರಿಸುವುದು. ಹಾಗೂ ಸಹಾಯಧನ ಮಂಜೂರಾತಿಗಾಗಿ ಜಿಲ್ಲಾ ಮಟ್ಟದ ಅಧಿಕಾರಿಗೆ ನಮೂನೆ-1 ಮತ್ತು 2 ನ್ನು ಸಲ್ಲಿಸುವುದು.

5) ಸಹಾಯಧನವನ್ನು ಮಂಜೂರು ಮಾಡುವ ಅಧಿಕಾರವನ್ನು ಆಯಾ ವಲಯ ಮಟ್ಟದ ಮೀನುಗಾರಿಕೆ ಅಧಿಕಾರಿಗೆ ಪ್ರದತ್ತವಾಗಿರುತ್ತದೆ.

6) ಮಂಜೂರಾತಿ ಆದನಂತರ ಸಹಾಯಧನವನ್ನು ತಾಲ್ಲೂಕು ಮಟ್ಟದ ಮೀನುಗಾರಿಕೆ ಅಧಿಕಾರಿಗಳು ನಿಯಮಾನುಸಾರ ಸಾದಿಲ್ವಾರು ಬಿಲ್ಲುಗಳ ಮೂಲಕ ಸೆಳೆದು ಫಲಾನುಭವಿಯ ಖಾತೆಗೆ ಜಮಾ ಮಾಡತಕ್ಕದ್ದು.

7) ಫಲಾನುಭವಿಯು ಕೆರೆ/ ಕೊಳ /ಪಂಜರಗಳಲ್ಲಿ ಬಿತ್ತನೆ ಮಾಡಿದ ಮೀನಿನ/ಸೀಗಡಿಯ ಪ್ರಮಾಣ, ದಿನಾಂಕ, ವೆಚ್ಚ, ಆಹಾರ ನೀಡಿದ ವಿವರ, ಒಟ್ಟು ವೆಚ್ಚ, ಮೀನು/ ಸೀಗಡಿ ಹಿಡುವಳಿ (ಗಾತ್ರವಾರು) ಪ್ರಮಾಣ ಇವುಗಳನ್ನು ನೋಂದಣಿ ಪುಸ್ತಕದಲ್ಲಿ ದಾಖಲಿಸುವುದು ಹಾಗೂ ಇಲಾಖೆಗೆ ಪ್ರತಿ 2 ತಿಂಗಳಿಗೊಮ್ಮೆ ಮಾಹಿತಿ ನೀಡುವುದು.

8) ಫಲಾನುಭವಿಯು ಮೇಲಿನ ಷರತ್ತಿಗೆ ಒಪ್ಪಿ ಕೆರೆ/ ಕೊಳ /ಪಂಜರಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ 200 ರೂ ಛಾಪಾ ಕಾಗದದಲ್ಲಿ ಒಪ್ಪಿಗೆ ಪತ್ರವನ್ನು ನೀಡುವುದು.

9) ಫಲಾನುಭವಿಯು ಸಂಪೂರ್ಣ ಮಾಹಿತಿ ನೀಡದಿದ್ದರೆ, ನಿಯಮಾನುಸಾರ ಅನುಷ್ಠಾನ ಗೊಳಿಸದಿದ್ದರೆ ಕೆರೆ ಗುತ್ತಿಗೆಯನ್ನು ರದ್ದುಪಡಿಸಲು ಇಲಾಖೆಯಿಂದ ಕ್ರಮ ಕೈಗೊಳ್ಳುವುದು.

(ರಶ್ಮಿ ಶ್ರೀಕಾಂತ ಗಜರೆ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

## ಕರ್ನಾಟಕಸರ್ಕಾರ

## (ಮೀನುಗಾರಿಕೆ ಇಲಾಖೆ)

## ಸೀಗಡಿ ಮತ್ತು ಹಿನ್ನೀರು ಮೀನು ಕೃಷಿಗೆ ಪ್ರೋತ್ಸಾಹ ಯೋಜನೆ ಸಹಾಯಧನಕ್ಕೆ ಅರ್ಜಿ

## ನಮೂನೆ-1

| | | |
|---|---|---|
| 1 | ಅರ್ಜಿದಾರರ ಹೆಸರು ಮತ್ತು ಆಧಾರ ಸಂಖ್ಯೆ | |
| 2 | ಪೂರ್ಣವಿಳಾಸ | |
| 3 | ಜಾತಿ (ಎಸ್.ಸಿ./ಎಸ್.ಟಿ./ಸಾಮಾನ್ಯ) | |
| 4 | ಕೆರೆಯ ಹೆಸರು ಮತ್ತು ತಾಲ್ಲೂಕು/ ಕೊಳದ (Lat-Long) | |
| 5 | ವಿಲೇವಾರಿ ವಿಧಾನ | |
| 6 | ಜಲವಿಸ್ತೀರ್ಣ (ಹೆ.ಗಳಲ್ಲಿ) | |
| 7 | ಅಚ್ಚುಕಟ್ಟು (ಹೆ.ಗಳಲ್ಲಿ) | |
| 8 | ಉಪಯುಕ್ತತಾ ಜಲವಿಸ್ತೀರ್ಣ (ಹೆ.ಗಳಲ್ಲಿ) | |
| 9 | ಗುತ್ತಿಗೆ ಅವಧಿ (ನವೀಕರಣ ಮತ್ತು ಆದೇಶ ಪ್ರತಿ ಲಗತ್ತಿಸುವುದು) | |
| 10 | ಅ. ಪ್ರಸಕ್ತ ಸಾಲಿನ ಗುತ್ತಿಗೆ ಮೊತ್ತ ಪಾವತಿಸಿರುವ ವಿವರ<br>ಆ. ಖರೀದಿಸುವ ಸೀಗಡಿ ಮರಿಗಳನ್ನು/ಬಲಿತ ಹಿನ್ನೀರು ಮೀನುಮರಿಗಳ ಸಂಖ್ಯೆ ಮತ್ತು ಮೊತ್ತ<br>ಇ. ಖರೀದಿಸುವ ಸೀಗಡಿ /ಮೀನು ಆಹಾರ ಪ್ರಮಾಣ ಮತ್ತು ಮೊತ್ತ | ಮೊತ್ತ:<br>ಜಿ.ಆರ್.ಸಂಖ್ಯೆ:<br>ದಿನಾಂಕ: |
| 11 | ಒಟ್ಟು | |

ದಿನಾಂಕ:

ಸ್ಥಳ:

ಫಲಾನುಭವಿಯ ಸಹಿ

## ಶಿಫಾರಸ್ಸು ಪತ್ರ

ಶ್ರೀ/ಶ್ರೀಮತಿ ---------------- ರವರ ಅರ್ಜಿಯನ್ನು ಎಲ್ಲಾ ದಾಖಲಾತಿಗಳೊಂದಿಗೆ ದಿನಾಂಕ:-------- ರಂದು ಸ್ವೀಕರಿಸಿದ್ದು, ಕೆರೆಯ ಅರೇ ತೀವ್ರ ಮೀನು ಕೃಷಿಗೆ ಯೋಗ್ಯವಾಗಿದ್ದು ಕೈಗೊಳ್ಳಲು ಶಿಫಾರಸ್ಸು ಮಾಡಲಾಗಿದೆ.

ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2),

ಅನುಮತಿ ಪತ್ರ

## ನಮೂನೆ-2

ದಿನಾಂಕ:--------------ರಂದು ಮೀನುಗಾರಿಕೆ ಉಪನಿರ್ದೇಶಕರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕೆಳಕಂಡವರನ್ನು "ಸೀಗಡಿ ಮತ್ತು ಹಿನ್ನೀರು ಮೀನು ಕೃಷಿಗೆ ಪ್ರೋತ್ಸಾಹ " ಯೋಜನೆಯ ಫಲಾನುಭವಿಯೆಂದು ಆಯ್ಕೆ ಮಾಡಲಾಗಿದೆ.

| ಕ್ರ.ಸಂ. | ಹೆಸರು ಮತ್ತು ವಿಳಾಸ | ಕೆರೆಯ/ ಕೊಳ ಹೆಸರು | ತಾಲ್ಲೂಕು |
|---|---|---|---|
| | | | |

1. ಹೆಸರು
2. ವಿಳಾಸ
3. ಕೆರೆಯ/ ಕೊಳ ಹೆಸರು
4. ತಾಲ್ಲೂಕು

ಸದರಿಯವರು ನಿಯಮಾನುಸಾರ ಮೇಲಿನ ಕೆರೆ/ ಕೊಳದಲ್ಲಿ "ಸೀಗಡಿ (ಸಿಹಿನೀರು/ಸಮುದ್ರ) ಮತ್ತು ಹಿನ್ನೀರು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆಯಲ್ಲಿ ಅರೆ ತೀವ್ರ ಮಾದರಿಯಲ್ಲಿ ಮೀನು ಕೃಷಿ ಕೈಗೊಳ್ಳಲು ತಿಳಿಸಲಾಗಿದೆ.

ಜಿಲ್ಲಾ ಮೀನುಗಾರಿಕೆ ಅಧಿಕಾರಿ

ಕರ್ನಾಟಕ ಸರ್ಕಾರ

(ಮೀನುಗಾರಿಕೆ ಇಲಾಖೆ)

ಖರೀದಿಸಿದ ಹೂಡಿಕೆಗಳ ವಿವರ

ನಮೂನೆ-3

| | | |
|---|---|---|
| 1 | ಖರೀದಿಸಿದ ಸೀಗಡಿ / ಮೀನುಮರಿ ಸಂಖ್ಯೆ ಮತ್ತು ಮೊತ್ತ | |
| 2 | ಕಂತಿನಲ್ಲಿ ಖರೀದಿಸಿದ ಒಟ್ಟು ಸೀಗಡಿ/ ಮೀನು ಆಹಾರ ಪ್ರಮಾಣ (ಅನ್ವಯಿಸಿದಲ್ಲಿ) | |
| 3 | ಒಟ್ಟು ಹೂಡಿಕೆ ವೆಚ್ಚ | |
| 4 | ಸೀಗಡಿ/ ಮೀನುಮರಿ ದಾಸ್ತಾನು ಹಾಗೂ ಸೀಗಡಿ/ ಮೀನು ಆಹಾರ ದಾಸ್ತಾನು ಪೋಟೋಗಳು | |

ದಿನಾಂಕ:

ಸ್ಥಳ:

ಫಲಾನುಭವಿಯ ಸಹಿ

## ದೃಢೀಕರಣ

ಮೇಲಿನ ದಾಖಲು ಪತ್ರಗಳನ್ನು ಹಾಗೂ ಕೆರೆಯಲ್ಲಿ ಮೀನು ಕೃಷಿಯನ್ನು ಖುದ್ದಾಗಿ ಪರಿಶೀಲಿಸಲಾಗಿದ್ದು, ಅರ್ಜಿದಾರರು ----- ಕಂತಿನಲ್ಲಿ ಈ ಕೆಳಕಂಡ ಸಹಾಯಧನಕ್ಕೆ ಅರ್ಹರಾಗಿದ್ದು, ಸಹಾಯಧನ ಮಂಜೂರು ಮಾಡಬಹುದು.

ಮೀನುಮರಿ ಖರೀದಿಗೆ ಸಹಾಯಧನ:

ಮೀನುಮರಿ ಆಹಾರ ಸಹಾಯಧನ:

ಒಟ್ಟು ರೂ:

ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-2)